ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿರುವಂತಹ ವಿಚಾರವನ್ನು ವಿಚಾರಣೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ದ.ಕ. ಜಿಲ್ಲೆಯಲ್ಲಿರುವ ನ್ಯಾಯಾಲಯದ ಕಟ್ಟಡ ದುರಸ್ತಿ

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂತಹ ನ್ಯಾಯಾಲಯವೇ ತನಗೆ ಅನ್ಯಾಯವಾಗಿದೆ ಎಂದು ಹೇಳುವಂತಹ ಘಟನೆಯೊಂದನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಅಲ್ಲಿ ಮಳೆಗಾಲದಲ್ಲಿ ದಾಖಲೆಪತ್ರಗಳನ್ನು ಇಡುವಂತಹ ಕಟ್ಟಡವೂ ಸೋರುತ್ತಿದೆ. ಆ ಕಟ್ಟಡದಲ್ಲಿ ನೀರು ನಿಂತು ದಾಖಲೆಗಳಿಗೆ ಅಪಾಯ ಬರುವಂತಹ ಸ್ಥಿತಿ ಬಂದಿದೆ. ಇದೇ ರೀತಿಯಲ್ಲಿ ನ್ಯಾಯಾಧೀಶರುಗಳ ಮನೆಗಳೂ ಕೂಡ ಸೋರುತ್ತಿದೆ. ಇದಕ್ಕೆ ನಾಲ್ಕೂವರೆ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿ ಸರ್ಕಾರಕ್ಕೆ ಕಳುಹಿಸಿ ಒಂದು ವರ್ಷವಾದರೂ ಕೂಡ ಯಾವುದೇ ರೀತಿಯಾದ ಗ್ಯಾರಂಟಿಯನ್ನು ಸರ್ಕಾರ ಬಿಡುಗಡೆ ಮಾಡಿಲ್ಲ. ಲೋಕ್ ಅದಾಲತ್ ನಡೆಸುತ್ತಿದೆ, ಆದರೆ ಅಲ್ಲಿಗೆ ಯಾವುದೇ ಸ್ಟೇಷನರಿಯನ್ನು ಬಿಡುಗಡೆ ಮಾಡಿಲ್ಲ, ಜೆರಾಕ್ಸ್ ಯಂತ್ರ ಕೂಡ ಕೆಟ್ಟು ಹೋಗಿದೆ. ಅಲ್ಲಿ ಅನೇಕ ರಹಸ್ಯ ದಾಖಲೆಗಳನ್ನು ಹೊರಗಡೆ ಇಡಬೇಕಾಗಿದೆ. ಇವತ್ತಿಗೂ ಅದರ ದುರಸ್ಥಿಗೆ ಬೇಕಾದಂತಹ ಅನುದಾನವನ್ನು ಬಿಡುಗಡೆ ಮಾಡಿಲ್ಲ. ಇಲ್ಲಿ ಮೊನ್ನೆ ಕೆ.ಇ.ಬಿ.ಬಿಲ್ ಕೊಡುವುದಕ್ಕಾಗದೇ ವಿದ್ಯುತ್ ಅನ್ನು ಡಿಸ್‌ಕನೆಕ್ಟ್ ಮಾಡುವಂತಹ ದುಃಸ್ಥಿತಿಗೆ ಬಂದಿತ್ತು. ಆದರೆ ಏನೋ ಒಂದು ಅಬ್ಲಿಕೇಷನ್‌ಗೋಸ್ಕರ ವಿದ್ಯುತ್ ಅನ್ನು ಡಿಸ್‌ಕನೆಕ್ಟ್ ಮಾಡಲಿಲ್ಲ. ಈ ನ್ಯಾಯಾಲಯಕ್ಕೆ ಹೊಸ ಕಟ್ಟಡಕ್ಕೆ ಸ್ಯಾಂಕ್ಷನ್ ಆಗಿದೆ, ಆದರೆ ಯಾವುದೇ ರೀತಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡಿಲ್ಲ. ಎಲ್ಲಾ ಸಮಸ್ಯೆಗಳಿಗೂ ಸರ್ಕಾರ ಸ್ಪಂದಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವಂಥಾದ್ದು ನನ್ನ ಇಲಾಖೆಗೆ ಸಂಬಂಧಪಟ್ಟಂತಹ ವಿಚಾರವಾಗಿದೆ ಮತ್ತು ಕಾನೂನು ಸಚಿವರ ಇಲಾಖೆಗೆ ಸಂಬಂಧಪಟ್ಟದ್ದಾಗಿದೆ. ನಾವು ಇದಕ್ಕೆ ಗಮನ ಹರಿಸಿ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ರಾಮದುರ್ಗ ಕೃಷಿ ಮಾರುಕಟ್ಟೆ ಸಮಿತಿಯಿಂದ ನಿವೇಶನ ವಿತರಣೆಯಲ್ಲಿ ಆಗಿರುವ ಅವ್ಯವಹಾರಗಳು

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷರೆ, ರಾಮದುರ್ಗ ಕೃಷಿ ಮಾರುಕಟ್ಟೆ ಸಮಿತಿಗೆ ಸಂಬಂಧಪಟ್ಟಂತಹ ವಿಷಯವಾಗಿದೆ. ಈ ಸಮಿತಿಯಿಂದ ನಿವೇಶನಗಳನ್ನು ವಿತರಣೆ ಮಾಡುವಂತಹ ಸಂದರ್ಭದಲ್ಲಿ ಅಕ್ರಮಗಳು ನಡೆದಿದೆ. ಈ ನಿವೇಶನಗಳನ್ನು ವಿತರಣೆ ಮಾಡುವುದಕ್ಕೆ ದಿನಾಂಕ : 18-2-1998 ರಲ್ಲಿ ಒಂದು ನೋಟಿಫಿಕೇಷನ್ ಹೊರಡಿಸಿದ್ದಾರೆ. ಈ ನೋಟಿಫಿಕೇಷನ್‌ನಲ್ಲಿ ಮುಖ್ಯವಾದಂತಹ ಸಮಸ್ಯೆ ಏನೆಂದರೆ ಕಳೆದ ಮೂರು ವರ್ಷಗಳಲ್ಲಿ ಈ ಮಾರುಕಟ್ಟೆ ಸಮಿತಿಗೆ ಜಮಾ ಮಾಡುವಂತಹ ಶುಲ್ಕವನ್ನು ಸರಾಸರಿಯಲ್ಲಿ ಗಣನೆಗೆ ತೆಗೆದುಕೊಂಡು ಹೆಚ್ಚಿನ ಶುಲ್ಕವನ್ನು ಕಟ್ಟಿದಂಥವರಿಗೆ ನಿವೇಶನಗಳನ್ನು ಹಂಚುವಾಗ ಆದ್ಯತೆಯನ್ನು ಕೊಡಲಾಗುವುದೆಂದು ಒಂದು ಶರತ್ತು ಇದೆ.